

بسم اللهِ الرّحمٰن الرّحيم

# ತಬೂಕ್ ಯುದ್ಧದ ನಂತರದ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **05–12–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ ـ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ ـ

اَلْحَمْدُ لِلّٰهِ رَبِّ الْعَالَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ اِيَّاكَ نَعْبُدُ وَاِيَّاكَ نَسْتَعِيْنُ ـ

اِهْدِنَا الصِّرَاطَ الْمُسْتَقِيْمَ ـ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕಳೆದ ಖುತ್ಬದಲ್ಲಿ ಹಝ್ರತ್ ಕಅಬ್ ಬಿನ್ ಮಾಲಿಕ್(ರ) ಮತ್ತು ಇತರ ಕೆಲವು ಸಹಾಬಿಯರು ತಬೂಕ್ ಯುದ್ಧದಿಂದ ಹಿಂದೆ ಉಳಿದ ಬಗ್ಗೆ ಹಾಗೂ ಆ ಕುರಿತು ಹಝ್ರತ್ ಪೈಗಂಬರ್(ಸ) ಅಸಂತುಷ್ಟಿ ಹೊಂದಿದ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಇದನ್ನು ಉಲ್ಲೇಖಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸಹ ಜಮಾಅತ್ತಿಗೆ ಉಪದೇಶ ನೀಡಿದ್ದಾರೆ. ಇದು 1936ರ ಮಾತಾಗಿದೆ. ಈ ಘಟನೆಯನ್ನು ಉಲ್ಲೇಖಿಸುತ್ತಾ ಅವರು ಹೇಳುತ್ತಾರೆ:

ಇಲ್ಲಿ (ಖಾದಿಯಾನಿನಲ್ಲಿ) ನಾನು ನೋಡಿದ್ದೇನೆ. ಯಾರೊಂದಿಗೆ ಮಾತನಾಡುವುದನ್ನು ನಿಷೇಧಿಸಲಾಗಿದೆಯೋ, ಅವರು ಬಡಾವಣೆಗಳಿಗೆ ಪ್ರವೇಶಿಸಿ ಅಹ್ಮದಿಯರ ಮನೆಗಳಿಗೆ ಹೋಗುತ್ತಾರೆ, ಆದರೆ ನೆರೆಹೊರೆಯವರಿಗೆ ಅದರ ಅರಿವೇ ಇರುವುದಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಇನ್ನೊಂದೆಡೆ ಹೇಳುತ್ತಾರೆ: 'ಕಅಬ್ ಬಿನ್ ಮಾಲಿಕ್(ರ)ರ ಘಟನೆಯು ನಮಗೆ ಉತ್ತಮ ಪಾಠವನ್ನು ಕಲಿಸುತ್ತದೆ. ಅವರು ಎಲ್ಲ ಯುದ್ಧಗಳಲ್ಲಿ ಹಝ್ರತ್ ಪೈಗಂಬರ್(ಸ)ರ ಜೊತೆಗಿದ್ದರು, ಮಕ್ಕಾ ವಿಜಯದಲ್ಲಿಯೂ ಜೊತೆಗಿದ್ದರು, ಆದರೆ ತಬೂಕ್ ಯುದ್ಧದಲ್ಲಿ ಆಲಸ್ಯದಿಂದ ಹಿಂದೆ ಉಳಿದ ಕಾರಣ ಅವರಿಗೆ ಹಝ್ರತ್ ಪೈಗಂಬರ್(ಸ) ಶಿಕ್ಷೆಯನ್ನು ನೀಡಿದರು.

ಆದರೆ ಇಂದಿನ ಜನರು ಹೇಗಿದ್ದಾರೆಂದರೆ, ಒಂದು ವೇಳೆ ಅವರ ತಪ್ಪುಗಳ ಬಗ್ಗೆ ಪ್ರಶ್ನಿಸಿದರೆ ಅವರು 'ನಮ್ಮ ಸೇವೆಗಳನ್ನು ಪರಿಗಣಿಸಲಾಗಿಲ್ಲ, ನಮಗೆ ತಕ್ಕುದಾದ ಬೆಲೆ ನೀಡಲಾಗಿಲ್ಲ' ಎಂದು ಹೇಳುತ್ತಾರೆ. ವ್ಯವಸ್ಥೆ ಎಂಬುದು ಒಂದು ವಿಷಯ, ಸೇವೆ ಮಾಡುವುದು ಇನ್ನೊಂದು ವಿಷಯ. ವ್ಯವಸ್ಥೆಯನ್ನು ಕಾಪಾಡಿಕೊಳ್ಳಲಿಕ್ಕಾಗಿ ಯಾರೇ ತಪ್ಪು ಮಾಡಿದರೂ ಪ್ರಶ್ನಿಸಲಾಗುತ್ತದೆ.

ಆದ್ದರಿಂದ, ಅಲ್ಲಾಹನ ಆದೇಶ ಪ್ರಕಾರ, ಶೈತಾನನನ್ನು ಓಡಿಸುವಂತಹ ಪ್ರಯತ್ನಗಳನ್ನು ದೀನಿಗಾಗಿ ಮಾಡಿರಿ. ಆದರೆ ನಿಮ್ಮನ್ನು ಹೊಗಳಲಿಕ್ಕಾಗಿ ಎಂದಿಗೂ ಸೇವೆ ಮಾಡಬೇಡಿರಿ. ಸೇವೆ ಮಾಡಿದ ನಂತರ, ನಿಮ್ಮ ತಪ್ಪುಗಳ ಬಗ್ಗೆ ನಿಮ್ಮನ್ನು ಪ್ರಶ್ನಿಸಬಾರದು ಎಂದು ಎಂದಿಗೂ ಭಾವಿಸಬೇಡಿರಿ. ಅಲ್ಲಾಹನ ಮೇಲೆ ಉಪಕಾರ ಮಾಡಿದಂತೆ ಚಿಂತಿಸಬೇಡಿರಿ. ಉಪಕಾರದ ಬಗ್ಗೆ ನೆನಪು ಹುಟ್ಟಿಸಬೇಡಿರಿ ಅಥವಾ ಮನನೋಯಿಸುವ ಮಾತನ್ನಾಡಬೇಡಿರಿ. ಎಲ್ಲ ಮಾರ್ಗಗಳಿಂದ ಇಸ್ಲಾಮಿನ ಸೇವೆ ಮಾಡಿರಿ. ಉಪಕಾರ ಮಾಡುವುದಾಗಿ ಭಾವಿಸಬೇಡಿ, ಬದಲಾಗಿ ಸೇವೆ ಮಾಡಿರಿ. ಅಲ್ಲಾಹನ ಸಂಪ್ರೀತಿ ಗಳಿಸಲು ಇರಬೇಕಾದ ಭಾವನೆ ಇದಾಗಿರಬೇಕು.

(ಹುಝೂರ್ ಹೇಳಿದರು:) ತಬೂಕ್ ಯುದ್ಧಕ್ಕಾಗಿ ಮಾಡಲಾದ ಪ್ರಯಾಣವು ಎಷ್ಟು ವಿವೇಕಯುತ ಮತ್ತು ಶುಭಕರ ಸಾಬೀತಾಯಿತು ಎಂದರೆ, ಇಡೀ ಅರಬ್ ದೇಶದಲ್ಲಿ ಮುಸ್ಲಿಮರ ಪ್ರಭಾವವು ನೆಲೆಸಿತು ಮತ್ತು ಸ್ವಲ್ಪ ಸಮಯದಲ್ಲೇ ಇಡೀ ಅರೇಬಿಯದಲ್ಲಿ ಇಸ್ಲಾಮಿನ ಧ್ವಜ ಹಾರಾಡಲು ಪ್ರಾರಂಭಿಸಿತು. ಈ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ತಬೂಕ್‌ನಿಂದ ಹಿಂದಿರುಗಿದ ನಂತರ, ತಾಯಿಫ್‌ನ ಜನರು ಕೂಡ ವಿಧೇಯತೆಯನ್ನು ಒಪ್ಪಿಕೊಂಡರು. ಅನಂತರ ಅರೇಬಿಯಾದ ವಿಭಿನ್ನ ಬುಡಕಟ್ಟುಗಳು ಕೂಡ ಒಂದೊಂದಾಗಿ ಬಂದು ಇಸ್ಲಾಮೀ ಆಡಳಿತದಲ್ಲಿ ಸೇರಿಕೊಳ್ಳಲು ಅನುಮತಿ ಕೋರಿದರು ಮತ್ತು ಇಡೀ ಅರೇಬಿಯಾದಲ್ಲಿ ಇಸ್ಲಾಮಿನ ಧ್ವಜ ಹಾರಲಾರಂಭಿಸಿತು.

ತಬೂಕ್ ಯುದ್ಧದಿಂದ ಹಿಂದಿರುಗಿದ ನಂತರ, ಸರಿಯ್ಯಃ ಖಾಲಿದ್ ಬಿನ್ ವಲೀದ್ ಎಂದು ಕರೆಯಲ್ಪಡುವ ಒಂದು ದಂಡಯಾತ್ರೆ ಕೂಡ ನಡೆಯಿತು. ಇದನ್ನು ನಜ್‌ರಾನಿನ ಒಂದು ಭಾಗವಾದ ಬನೂ ಹಾರಿಸ್‌ನ ಕಡೆಗೆ ಕಳುಹಿಸಲಾಗಿತ್ತು. ಒಂದು ವರದಿಯ ಪ್ರಕಾರ, ಈ ದಂಡಯಾತ್ರೆ ಹಿಜರಿ 10, ರಬೀಉಲ್ ಅವ್ವಲ್ ಮಾಸದಲ್ಲಿ ನಡೆಯಿತು. ಈ ದಂಡಯಾತ್ರೆಗೆ ಕಳುಹಿಸುವಾಗ, ಹಝ್ರತ್ ಪೈಗಂಬರ್(ಸ) ಖಾಲಿದ್ ಬಿನ್ ವಲೀದ್(ರ)ರಿಗೆ ಹೀಗೆ ಮಾರ್ಗದರ್ಶನ ನೀಡಿದರು: ಆ ಗೋತ್ರದವರ ಮೇಲೆ ದಾಳಿ ಮಾಡುವ ಮೊದಲು, ಅವರಿಗೆ ಮೂರು ಬಾರಿ ಇಸ್ಲಾಮಿನ ಸಂದೇಶ ನೀಡಬೇಕು, ಅವರು ಒಪ್ಪಿಕೊಳ್ಳದಿದ್ದರೆ ಮಾತ್ರ ಅವರೊಂದಿಗೆ ಯುದ್ಧ

ಮಾಡಬೇಕು. ಹಝ್ರತ್ ಖಾಲಿದ್(ರ) ಈ ಮಾರ್ಗದರ್ಶನವನ್ನು ಪಾಲಿಸಿದರು ಮತ್ತು ಆ ಎಲ್ಲ ಜನರು ಮುಸಲ್ಮಾನರಾದರು. ಹಝ್ರತ್ ಖಾಲಿದ್(ರ) ರಸೂಲುಲ್ಲಾಹ್(ಸ)ರಿಗೆ ಒಂದು ಪತ್ರವನ್ನು ಕಳುಹಿಸಿದರು, ಅದರಲ್ಲಿ ಹೀಗೆ ಬರೆದರು: 'ನಿಮ್ಮ ಮಾರ್ಗದರ್ಶನದ ಪ್ರಕಾರ ನಾವು ಅವರಿಗೆ ಇಸ್ಲಾಮಿನ ಸಂದೇಶವನ್ನು ತಲುಪಿಸಿದೆವು ಮತ್ತು ಅವರು ಇಸ್ಲಾಮನ್ನು ಸ್ವೀಕರಿಸಿದ್ದಾರೆ. ಈಗ ನಾನು ಅವರೊಂದಿಗೆ ನೆಲೆಸಿದ್ದೇನೆ ಮತ್ತು ಅವರಿಗೆ ದೀನಿನ ಆದೇಶಗಳನ್ನು ಹೇಳಿ ಕೊಡುತ್ತಿದ್ದೇನೆ. ಇನ್ನು ನಿಮ್ಮ ಕಡೆಯಿಂದ ಬರುವ ಮುಂದಿನ ಆದೇಶ ಪ್ರಕಾರ ಕಾರ್ಯನಿರ್ವಹಿಸುತ್ತೇನೆ.' ಹಝ್ರತ್ ಪೈಗಂಬರ್(ಸ) ಈ ಪತ್ರಕ್ಕೆ ಉತ್ತರಿಸುತ್ತಾ ಹೀಗೆ ಬರೆದರು: 'ನಿಮ್ಮ ಪತ್ರದಿಂದ ಬನೂ ಹಾರಿಸ್ ಇಸ್ಲಾಮ್ ಸ್ವೀಕಾರ ಮಾಡಿರುವುದಾಗಿ ತಿಳಿಯಿತು. ಆದ್ದರಿಂದ ನೀವು ಅವರಿಗೆ ದೈವಿಕ ಪ್ರತಿಫಲದ ಸುವಾರ್ತೆ ನೀಡಿರಿ ಮತ್ತು ದೈವಿಕ ಶಿಕ್ಷೆಯ ಬಗ್ಗೆ ಎಚ್ಚರಿಸಿರಿ ಹಾಗೂ ಅವರಲ್ಲಿರುವ ಕೆಲವು ಜನರ ಜೊತೆಗೆ ನಮ್ಮ ಬಳಿಗೆ ಬನ್ನಿರಿ.' ಹಾಗೆ ಹಝ್ರತ್ ಖಾಲಿದ್(ರ) ಅವರಲ್ಲಿ ಕೆಲವರನ್ನು ಕರೆದುಕೊಂಡು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು.

ಹಝ್ರತ್ ಪೈಗಂಬರ್(ಸ) ಖೈಸ್ ಬಿನ್ ಹುಸೈನ್‌ರನ್ನು ಬನೂ ಹಾರಿಸ್ ಗೋತ್ರದದ ಅಮೀರನ್ನಾಗಿ ನೇಮಿಸಿ ಅವರನ್ನು ಶವ್ವಾಲ್ ಅಥವಾ ಧ಼ಿಲ್‌ಕಅ್‌ದ ತಿಂಗಳ ಕೊನೆಯಲ್ಲಿ ಹಿಂದಿರುಗಿ ಕಳುಹಿಸಿದರು. ಅವರು ಹಿಂದಿರುಗಿದ ನಾಲ್ಕು ತಿಂಗಳ ನಂತರ, ಹಝ್ರತ್ ಪೈಗಂಬರ್(ಸ) ನಿಧನಗೊಂಡರು.

ಹಝ್ರತ್ ಪೈಗಂಬರ್(ಸ)ರ ಕೊನೆಯ ಯುದ್ಧ ತಬೂಕ್ ಯುದ್ಧವಾಗಿತ್ತು ಮತ್ತು ಅವರು ಕಳುಹಿಸಿದ ಕೊನೆಯ ದಂಡಯಾತ್ರೆ ಉಸಾಮರ ಸೇನೆಯದ್ದಾಗಿತ್ತು. ಉಸಾಮರ ಸೇನೆಗೆ ಮುಂಚೆ ಒಂದು ಸೈನ್ಯವು ಹೊರಟಿತ್ತು. ಈ ಸಂಬಂಧವಾಗಿ ಬುಖಾರಿಯಲ್ಲಿ ಹಝ್ರತ್ ಅನಸ್(ರ)ರ ವರದಿಯಿದೆ: ಹಝ್ರತ್ ಪೈಗಂಬರ್(ಸ) ಜನರೊಡನೆ ಹಝ್ರತ್ ಝೈದ್(ರ), ಹಝ್ರತ್ ಜಅ್‌ಫರ್(ರ) ಮತ್ತು ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ)ರ ಶಹಾದತಿನ ಬಗ್ಗೆ ಹೇಳಿದರು. ಇದನ್ನು ಹೇಳುವಾಗ ಹಝ್ರತ್ ಪೈಗಂಬರ್(ಸ)ರ ಕಣ್ಣುಗಳಿಂದ ಕಂಬನಿ ಸುರಿಯುತ್ತಿತ್ತು. ಆಮೇಲೆ ಹಝ್ರತ್ ಪೈಗಂಬರ್(ಸ) ಹೇಳಿದರು: 'ನಂತರ ಅಲ್ಲಾಹನ ಖಡ್ಗಗಳಲ್ಲಿ ಒಂದು ಖಡ್ಗವಾದ ಖಾಲಿದ್ ಬಿನ್ ವಲೀದ್(ರ) ಇಸ್ಲಾಮಿನ ಧ್ವಜವನ್ನು ಹಿಡಿದರು. ಅಲ್ಲಾಹನು ಅವರ ಕೈಯಿಂದ ಮುಸ್ಲಿಮರಿಗೆ ವಿಜಯ ನೀಡಿದನು.'

ವಿದಾಯದ ಹಜ್ಜಿನಿಂದ ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಹಿಂದಿರುಗಿದ ವೇಳೆ ಮುಸಲ್ಮಾನರಿಗೆ ದಕ್ಷಿಣದ ಕಡೆಯಿಂದ ಯಾವುದೇ ಅಪಾಯ ಇದ್ದಿರಲಿಲ್ಲ, ಆದರೆ ಉತ್ತರ ದಿಕ್ಕಿನಿಂದ ರೋಮನ್ನರ ಕಡೆಯಿಂದ ಇನ್ನೂ ಅಪಾಯವಿತ್ತು. ಏಕೆಂದರೆ ಆ ಕ್ರೈಸ್ತರಿಗೆ ಇನ್ನೂ ತಮ್ಮ ಶಕ್ತಿಯ ಬಗ್ಗೆ ದೊಡ್ಡ ಹೆಮ್ಮೆಯಿತ್ತು. ಆದ್ದರಿಂದ ಯಾವುದೇ ಸಮಯದಲ್ಲಿ ಅವರ ಕಡೆಯಿಂದ ದಾಳಿಯ ಸಾಧ್ಯತೆಯಿತ್ತು. ಅದೇ ರೀತಿ, ಮೌತ ಯುದ್ಧದ ಹುತಾತ್ಮರ ಪ್ರತಿಕಾರ ತೀರಿಸಲಿಕ್ಕೆ ಬಾಕಿಯಿತ್ತು. ಏಕೆಂದರೆ ಆ ಯುದ್ಧದಲ್ಲಿ ಹಝ್ರತ್ ಖಾಲಿದ್(ರ)ರ ಕೌಶಲ್ಯದಿಂದಾಗಿ ಮುಸ್ಲಿಮರ ಸೈನ್ಯವು ಮದೀನಕ್ಕೆ ಮರಳುವುದರಲ್ಲಿ ಯಶಸ್ವಿಯಾಗಿತ್ತು. ಹಝ್ರತ್ ಪೈಗಂಬರ್(ಸ) ಹಜ್‌ನಿಂದ ಹಿಂದಿರುಗಿ ಹೆಚ್ಚು ದಿನಗಳು ಕಳೆದಿರಲಿಲ್ಲ, ಅಷ್ಟರಲ್ಲೇ ಹಝ್ರತ್ ಪೈಗಂಬರ್(ಸ) ಹಝ್ರತ್ ಉಸಾಮ ಬಿನ್ ಝೈದ್(ರ)ರ ನೇತೃತ್ವದ ಒಂದು ಸೇನೆಯೊಡನೆ ಸಿರಿಯಾದ ಮೇಲೆ ದಾಳಿ ಮಾಡಲು ಆದೇಶ ನೀಡಿದರು.

ಹಝ್ರತ್ ಪೈಗಂಬರ್(ಸ)ರ ಅನಾರೋಗ್ಯಕ್ಕೆ ಮುಂಚೆ ಪ್ರಾರಂಭವಾಗಿದ್ದ ಈ ಸೇನೆಯ ತಯಾರಿಯು, ಅವರ ನಿಧನಕ್ಕೆ ಎರಡು ದಿನಗಳಿಗೆ ಮುಂಚೆ ಶನಿವಾರದಂದು ಪೂರ್ಣಗೊಂಡಿತು. ಹಝ್ರತ್ ಪೈಗಂಬರ್(ಸ) ಸಫರ್ ತಿಂಗಳ ಕೊನೆಯಲ್ಲಿ ರೋಮನ್ನರೊಂದಿಗೆ ಯುದ್ಧ ಮಾಡಲು ಆದೇಶ ನೀಡಿದರು. ಆ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹಝ್ರತ್ ಉಸಾಮ(ರ)ರನ್ನು ಕರೆದು ಹೀಗೆ ಹೇಳಿದರು: 'ನಿಮ್ಮ ತಂದೆಯ ಶಹಾದತ್ ನಡೆದ ಸ್ಥಳದ ಕಡೆಗೆ ಹೋಗಿರಿ ಮತ್ತು ಶತ್ರುಗಳನ್ನು ಸುತ್ತುವರಿಯಿರಿ. ನಾನು ನಿಮ್ಮನ್ನು ಈ ಸೇನೆಯ ಸೇನಾಧಿಪತಿಯನ್ನಾಗಿ ನೇಮಿಸಿದ್ದೇನೆ. ಹಝ್ರತ್ ಪೈಗಂಬರ್(ಸ) ಕಟ್ಟಿದ ಧ್ವಜವನ್ನು ತೆಗೆದುಕೊಂಡು ಹಝ್ರತ್ ಉಸಾಮ(ರ) ಹೊರಟರು ಮತ್ತು ಅದನ್ನು ಹಝ್ರತ್ ಬುರೈದಾ ಬಿನ್ ಹುಸೈಬ್(ರ)ರಿಗೆ ಒಪ್ಪಿಸಿ, ಜುರ್ಫ್ ಎಂಬ ಸ್ಥಳದಲ್ಲಿ ಸೈನ್ಯವನ್ನು ಒಟ್ಟುಗೂಡಿಸಿದರು. ಜುರ್ಫ್ ಎಂಬುದು ಮದೀನಾದಿಂದ ಮೂರು ಮೈಲಿ ದೂರದಲ್ಲಿ ಉತ್ತರ ದಿಕ್ಕಿನಲ್ಲಿರುವ ಒಂದು ಸ್ಥಳವಾಗಿದೆ.

ಮುಹಾಜಿರರು ಮತ್ತು ಅನ್ಸಾರರ ಶ್ರೇಷ್ಠ ಸಹಾಬಿಯರಲ್ಲಿ ಬಹುತೇಕ ಎಲ್ಲರೂ ಈ ಸೈನ್ಯದಲ್ಲಿ ಸೇರಿದ್ದರು, ಇವರಲ್ಲಿ ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ), ಹಝ್ರತ್ ಅಬೂಉಬೈದಾ(ರ), ಹಝ್ರತ್ ಸಅದ್ ಬಿನ್ ಅಬೀ ವಖ್ಖಾಸ್(ರ), ಹಝ್ರತ್ ಸಯೀದ್ ಬಿನ್ ಝೈದ್(ರ), ಹಝ್ರತ್ ಖತಾದ ಬಿನ್ ನುಅ್‌ಮಾನ್(ರ) ಮತ್ತು ಹಝ್ರತ್ ಸಲಾಮಾ ಬಿನ್ ಅಸ್ಲಮ್(ರ) ಸೇರಿದ್ದರು. ಈ ಎಲ್ಲ ಮಹಾನ್ ಸಹಾಬಿಯರ ಮೇಲೆ ಹಝ್ರತ್ ಉಸಾಮ(ರ)ರನ್ನು ಅಮೀರರನ್ನಾಗಿ ನೇಮಿಸಲಾಗಿತ್ತು. 'ಇಂತಹ ಮಹಾನ್ ಸಹಾಬಿಯರ ಮೇಲೆ ಒಬ್ಬ ಯುವಕನನ್ನು ಅಮೀರನನ್ನಾಗಿ ಮಾಡಲಾಗಿದೆ' ಎಂದು ಹೇಳಿ ಜನರು ಮಾತುಕತೆ ಶುರುಮಾಡಿದರು. ಈ ವಿಷಯವು ಹಝ್ರತ್ ಪೈಗಂಬರ್(ಸ)ರ ಕಿವಿಗೆ ತಲುಪಿದಾಗ, ಅವರು ತೀವ್ರ ಬೇಸರಗೊಂಡರು ಮತ್ತು ಮಿಂಬರಿನ ಮೇಲೇರಿ ಜನರನ್ನು ಸಂಬೋಧಿಸಿ ಮಾತನಾಡಿದರು. ಹಝ್ರತ್ ಪೈಗಂಬರ್(ಸ) ತನ್ನ ಭಾಷಣದಲ್ಲಿ ಹಝ್ರತ್ ಉಸಾಮ(ರ) ಮತ್ತು ಅವರ ತಂದೆ ಹಝ್ರತ್ ಝೈದ್(ರ)ರ ಬಗ್ಗೆ ಅತ್ಯಂತ ಉತ್ತಮವಾದ ಮಾತುಗಳನ್ನು ಹೇಳಿದರು.

ಒಂದು ಕಡೆ ಹಝ್ರತ್ ಪೈಗಂಬರ್(ಸ)ರ ಕಾಯಿಲೆ ಹೆಚ್ಚಾಗುತ್ತಿತ್ತು ಮತ್ತು ಇನ್ನೊಂದೆಡೆ ಉಸಾಮರ ಸೈನ್ಯವು ಹೇಗಾದರೂ ಹೊರಡಬೇಕು ಎಂದು ಹಝ್ರತ್ ಪೈಗಂಬರ್(ಸ) ಒತ್ತಾಯಿಸುತ್ತಿದ್ದರು. ಭಾನುವಾರದಂದು ಉಸಾಮ(ರ) ಜುರ್ಫ್ ಎಂಬ ಸ್ಥಳದಿಂದ ಮರಳಿ ಹಝ್ರತ್ ಪೈಗಂಬರ್(ಸ)ರನ್ನು ಭೇಟಿಯಾಗಲು ಬಂದರು. ಹಝ್ರತ್ ಪೈಗಂಬರ್(ಸ)ರಿಗೆ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ, ಆದರೆ ಉಸಾಮ(ರ)ರಿಗಾಗಿ ದುಆ ಮಾಡುತ್ತಿದ್ದರು ಎಂಬಂತೆ ಹಝ್ರತ್ ಪೈಗಂಬರ್(ಸ) ಎರಡೂ ಕೈಗಳನ್ನು ಆಕಾಶದ ಕಡೆಗೆ ಎತ್ತುತ್ತಿದ್ದರು ಮತ್ತು ಉಸಾಮ(ರ)ರ ತಲೆಯ ಮೇಲೆ ಇಡುತ್ತಿದ್ದರು. ಸೋಮವಾರದಂದು ಹಝ್ರತ್ ಪೈಗಂಬರ್(ಸ)ರ ಆರೋಗ್ಯ ಸ್ವಲ್ಪ ಸುಧಾರಿಸಿದಾಗ ಹಝ್ರತ್ ಪೈಗಂಬರ್(ಸ) ಹಝ್ರತ್ ಉಸಾಮ(ರ)ರೊಡನೆ 'ಅಲ್ಲಾಹನ ಅನುಗ್ರಹದೊಂದಿಗೆ ಹೊರಡಿರಿ' ಎಂದು ಹೇಳಿದರು. ಉಸಾಮ(ರ) ಸೈನ್ಯಕ್ಕೆ ಮರಳಿ ಹೋಗಿ ಹೊರಡುವ ಆದೇಶ ನೀಡಿದರು. ಇದೇ ಸಮಯದಲ್ಲಿ, ಹಝ್ರತ್ ಉಸಾಮ(ರ)ರಿಗೆ ಹಝ್ರತ್ ಪೈಗಂಬರ್(ಸ)ರ ನಿಧನದ ಅಂತಿಮ ಕ್ಷಣಗಳ ಕುರಿತು ಸಂದೇಶ ತಲುಪಿತು. ಅವರು ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಮುಂತಾದ ಸಹಾಬಿಯರೊಂದಿಗೆ ಮರಳಿ ಬಂದರು. ಅದು ಹಝ್ರತ್ ಪೈಗಂಬರ್(ಸ)ರ ಜೀವನದ ಕೊನೆಯ ಕ್ಷಣಗಳಾಗಿದ್ದುವು, ಸ್ವಲ್ಪ ಸಮಯದಲ್ಲೇ ಹಝ್ರತ್ ಪೈಗಂಬರ್(ಸ) ನಿಧನರಾದರು.

ಹಝ್ರತ್ ಉಸಾಮ(ರ)ರ ಸೈನ್ಯವು ಹಝ್ರತ್ ಅಬೂಬಕರ್(ರ)ರ ಕೈಯಲ್ಲಿ ಬೈಅತ್ ಮಾಡಿದ ನಂತರ ಹೊರಟಿತು. ಈ ಸೈನ್ಯದ ಸಂಖ್ಯೆ ಮೂರು ಸಾವಿರವಿತ್ತು, ಅದರಲ್ಲಿ ಒಂದು ಸಾವಿರ ಕುದುರೆಸವಾರರು ಇದ್ದರು. ಈ ಸೈನ್ಯವು ಯಶಸ್ಸಿನೊಂದಿಗೆ ಹಿಂದಿರುಗಿತು. ಶತ್ರುಗಳು ಕೊಲ್ಲಲ್ಪಟ್ಟರು ಅಥವಾ ಕೈದಿಗಳಾದರು. ಮುಸ್ಲಿಮರಲ್ಲಿ ಯಾರಿಗೂ ಯಾವುದೇ ನಷ್ಟ ಉಂಟಾಗಲಿಲ್ಲ.

(ಹುಝೂರ್ ಹೇಳಿದರು:) ಈ ಯುದ್ಧಗಳ ಪ್ರಸ್ತಾಪ ಮುಕ್ತಾಯವಾಯಿತು. ಮುಂದಿನ ಬಾರಿ ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಯ ಇತರ ಕೆಲವು ಆಯಾಮಗಳ ಕುರಿತು ಹೇಳುತ್ತೇನೆ – ಇನ್‌ಶಾಅಲ್ಲಾಹ್.

ಖುತ್ಬದ ಕೊನೆಯಲ್ಲಿ ಹುಝೂರ್ ಇಬ್ಬರು ದಿವಂಗತರ ಬಗ್ಗೆ ಪ್ರಸ್ತಾಪಿಸಿದರು. ಅವರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು ಹಾಗೂ ಅವರ ಜನಾಝ಼ ಗ಼ಾಯಿಬ್ ನಮಾಝ್ ನಿರ್ವಹಿಸುವುದಾಗಿ ಹೇಳಿದರು.

——————————*****——————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis****(atba)*

At, ***'Masjid Mubarak',*** *Islamabad, Tilford,* U.K. On 05-12-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon